ಲೀಟರ್‌ನಂತೆ ಮತ್ತು ನಗರ ಪ್ರದೇಶದಲ್ಲಿನ 19 ಲಕ್ಷ ಪಡಿತರ ಚೀಟಿದಾರರಿಗೆ 7 ಲೀಟರ್‌ನಂತೆ ವಿತರಿಸಲಾಗುತ್ತಿದೆ

ಒಂದು ವೇಳೆ ಗ್ರಾಮಾಂತರ ಪ್ರದೇಶಕ್ಕೆ 5 ಲೀಟರ್‌ನಂತೆ ವಿತರಿಸಲು ಕನಿಷ್ಟ 5000 ಕೆ ಎಲ್ ಹೆಚ್ಚುವರಿ ಸೀಮೆಎಣ್ಣೆ ಬೇಕಾಗುತ್ತದೆ ಹಾಗಾಗಿ ಏಕ ರೂಪದಲ್ಲಿ ರಾಜ್ಯದಾದ್ಯಂತ ಸೀಮೆಎಣ್ಣೆ ವಿತರಣೆ ಸಾಧ್ಯವಾಗಿರುವುದಿಲ್ಲ

ಆ) ರಾಜ್ಯದಲ್ಲಿನ ಎಲ್ಲಾ ಅನಿಲ ರಹಿತ ಬಿಪಿಎಲ್, ಎಪಿಪೆಲ್, ಅಂತ್ಯೋದಯ ಪಡಿತರ ಚೀಟಿಗಳಿಗೆ ಸೀಮೆಎಣ್ಣೆಯನ್ನು ಆಯಾ ಪ್ರದೇಶಕ್ಕೆ ಅನುಗುಣವಾಗಿ ಸಮಾನವಾಗಿ ನೀಡಲಾಗುತ್ತಿದೆ

ಇ) ಅನಿಲ ಸಂಪರ್ಕ ಹೊಂದಿದ ಪಡಿತರ ಚೀಟಿದಾರರು ತಮಗೂ 2 ಲೀಟರ್ ಸೀಮೆಎಣ್ಣೆ ನೀಡಲು ಕೆಲವು ಜಿಲ್ಲೆಗಳಲ್ಲಿ ಕೋರುತ್ತಿರುತ್ತಾರೆ

ಈ) ಪ್ರಸ್ತುತ ಕೇಂದ್ರ ಸರ್ಕಾರದಿಂದ ನೀಡುತ್ತಿರುವ ಹಂಚಿಕೆ ಅತ್ಯಂತ ಕಡಿಮೆ ಇರುವುದರಿಂದ ಅನಿಲ ಸಂಪರ್ಕ ಹೊಂದಿದ ಪಡಿತರ ಚೀಟಿದಾರರಿಗೆ ಸೀಮೆಎಣ್ಣೆ ನೀಡಲು ಸಾಧ್ಯವಿರುವುದಿಲ್ಲ

ಉ) ಅನ್ವಯಿಸುವುದಿಲ್ಲ

709 (1127) ಮಾನ್ಯ ಆಹಾರ ಮತ್ತು ನಾಗರಿಕ ಸರಬರಾಜು ಹಾಗೂ ಗ್ರಾಹಕರ ವ್ಯವಹಾರಗಳ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದ ಬಿ ಪಿ ಎಲ್ ಕಾರ್ಡುದಾರರ ಸಮೀಕ್ಷೆಯನ್ನು ಮುಕ್ತಾಯಗೊಳಿಸಿ, ಕಾರ್ಡು ಹಂಚುವ ಕಾರ್ಯ ಮುಗಿದಿದೆಯೇ ,

ಆ) ಹಾಗಿದ್ದಲ್ಲಿ, ವಿತರಿಸಲಾದ ಬಿ ಪಿ ಎಲ್ ಕಾರ್ಡುಗಳ ಸಂಖ್ಯೆ ಎಷ್ಟು, (ಕ್ಷೇತ್ರವಾರು ವಿವರ ನೀಡುವುದು) ,

ಇ) ಬಿ ಪಿ ಎಲ್ ಕಾರ್ಡು ವಿತರಣೆಗೆ ಸರ್ಕಾರ ಶೇಕಡವಾರು ಮಿತಿ ಹಾಕಲಾಗಿದೆಯೇ , ಹಾಗಿದ್ದಲ್ಲಿ, ಚಿಕ್ಕಮಗಳೂರು ಜಿಲ್ಲೆಗೆ ಹಾಕಿರುವ ಮಿತಿ ಏನು,

ಈ) ಈ ಮಿತಿಯಿಂದ ಅರ್ಹ ಬಡವರಿಗೂ ಅನ್ಯಾಯವಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ,

ಉ) ಬಂದಿದ್ದಲ್ಲಿ, ಸರ್ಕಾರದ ಕ್ರಮವೇನು ?

ಶ್ರೀ ಗೋವಿಂದ ಎಂ ಕಾರಜೋಳ (ಆಹಾರ ಮತ್ತು ನಾಗರಿಕ ಸರಬರಾಜು ಹಾಗೂ ಗ್ರಾಹಕರ ವ್ಯವಹಾರಗಳ ಸಚಿವರು)

ಅ) ಮುಕ್ತಾಯವಾಗಿದೆ

ಆ) ದಿನಾಂಕ 5 2 2007ರಂತೆ ರಾಜ್ಯದಲ್ಲಿ ಪ್ರಸ್ತುತ ಬಿ ಪಿ ಎಲ್ ಕಾರ್ಡು ಹೊಂದಿರುವವರ ವಿವರ ಕೆಳಕಂಡಂತಿದೆ

ಅನ್ನಪೂರ್ಣ	–	25,452
ಎಎವೈ	–	11,75,912
ಬಿಪಿಎಲ್	–	53,87,103
ಒಟ್ಟು	–	65,88,467

ಕ್ಷೇತ್ರವಾರು ವಿವರಗಳನ್ನು ಮಾನ್ಯ ಸದಸ್ಯರಿಗೆ ಪ್ರತ್ಯೇಕವಾಗಿ ಒದಗಿಸಲಾಗುವುದು

ಇ) ಇಲ್ಲ

ಸರ್ಕಾರದ ಸೂಚನೆಯನ್ವಯ ಗ್ರಾಮಾಂತರ ಪ್ರದೇಶದಲ್ಲಿ 12,000 ರೂ ಗಳ ಆದಾಯ ಮಿತಿಯನ್ನು ಹೊಂದಿರುವ ಕುಟುಂಬಗಳನ್ನು ಹಾಗೂ ಪಟ್ಟಣ ಪ್ರದೇಶದಲ್ಲಿ 17,000 ರೂ ಗಳ ಆದಾಯ ಮಿತಿಯನ್ನು ಹೊಂದಿರುವ ಕುಟುಂಬಗಳನ್ನು ಬಿಪಿಎಲ್ ಎಂಬುದಾಗಿ ಪರಿಗಣಿಸಲು ಮತ್ತು ಮನೆ ಮನೆ ಸಮೀಕ್ಷೆಯ ವೇಳೆ ನದರಿ ಕುಟುಂಬವು ಸಾಮಾಜಿಕ ಮತ್ತು ಆರ್ಥಿಕವಾಗಿ (ವಿಧಿಸಿರುವ ಮಾನದಂಡಗಳನ್ವಯ) ವಾಸಿಸುತ್ತಿರುವ ಜೀವನಶೈಲಿಯನ್ನು ಪರಿಗಣಿಸಿ ಸಮೀಕ್ಷೆಯನ್ನು ನಡೆಸಿ ಅರ್ಹತೆಗೆ ಅನುಗುಣವಾಗಿ ವರ್ಗವಾರು ಫಲಾನುಭವಿಗಳನ್ನು ಗುರುತಿಸಲಾಗಿದೆ

ಈ) ರಾಜ್ಯಾದ್ಯಂತ ಮನೆ ಮನೆ ಸಮೀಕ್ಷೆಯನ್ನು ಕೈಗೊಂಡು ಸಮೀಕ್ಷೆಯಲ್ಲಿ ಗುರುತಿಸಲಾದ ಫಲಾನುಭವಿಗಳಿಗೆ ಅರ್ಹತೆಗನುಗುಣವಾಗಿ ಅನ್ನಪೂರ್ಣ, ಅಂತ್ಯೋದಯ ಅನ್ನ, ಅಕ್ಷಯ, ಎಪಿಎಲ್ ತಾತ್ಕಾಲಿಕ ಪಡಿತರ ಕೂಪನ್‌ಗಳನ್ನು ವಿತರಿಸಲಾಗಿದೆ

ತಾತ್ಕಾಲಿಕ ಪಡಿತರ ಕೂವನ್‌ಗಳನ್ನು ವಿತರಣೆ ಮಾಡಿದ ನಂತರ, ಪಡಿತರ ಚೀಟಿ ಪಡೆಯಲು ವಂಚಿತರಾದವರು / ಲೋಪದೋಷಗಳು ಕಂಡು ಬಂದಲ್ಲಿ ಅಂತಹವರಿಂದ ಅಹವಾಲುಗಳನ್ನು ಸ್ವೀಕರಿಸಲಾಗಿದೆ ಸದರಿ

ಅಹವಾಲುಗಳನ್ನು ಪರಿಶೀಲಿಸಿ ಅರ್ಹತೆಗೆ ಅನುಗುಣವಾಗಿ ಪಡಿತರ ಚೀಟಿ ವಿತರಣೆಗೆ ಕ್ರಮ ವಹಿಸಲಾಗುತ್ತಿದೆ

ಆದ್ದರಿಂದ ಅರ್ಹ ಫಲಾನುಭವಿಗಳು ವಂಚಿತರಾಗಿರುವುದಿಲ್ಲ

ಊ) ಸಾರ್ವಜನಿಕರಿಂದ ಸ್ವೀಕರಿಸಲಾಗಿರುವ ಅಹವಾಲುಗಳ ಪೂರ್ಣ ವಿಲೇವಾರಿಯ ನಂತರ ತಾತ್ಕಾಲಿಕ ಪಡಿತರ ಚೀಟಿಗಳ ವಿತರಣೆಗೆ ಕ್ರಮ ಕೈಗೊಳ್ಳಲಾಗುವುದು ನಂತರ ಖಾಯಂ ಪಡಿತರ ಚೀಟಿಯನ್ನು ನೀಡಲಾಗುವುದು

710 (1128) ಶ್ರೀ ರವಿ ಸಿ ಟಿ (ಚಿಕ್ಕಮಗಳೂರು) – ಮಾನ್ಯ ಕೃಷಿ ಮಾರುಕಟ್ಟೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿ ಕೃಷಿ ಮಾರುಕಟ್ಟೆ ಪ್ರಾಂಗಣದಲ್ಲಿರುವ ರೈತ ಭವನಗಳು ಎಷ್ಟು , (ಜಿಲ್ಲಾವಾರು ವಿವರ ನೀಡುವುದು) ,

ಆ) ಚಿಕ್ಕಮಗಳೂರು ಎ ಪಿ ಎಂ ಸಿ ಯಲ್ಲಿ ರೈತ ಭವನ ಇಲ್ಲದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ,

ಇ) ಬಂದಿದ್ದಲ್ಲಿ, ರೈತ ಭವನ ನಿರ್ಮಿಸಲು ಸರ್ಕಾರ ಕ್ರಮ ಕೈಗೊಳ್ಳುವುದೇ ,

ಈ) ಕೃಷಿಕರ ಅನುಕೂಲಕ್ಕಾಗಿ ಎ ಪಿ ಎಂ ಸಿ ಗಳಲ್ಲಿ ಶೌಚಾಲಯ, ಕುಡಿಯುವ ನೀರಿನ ಸೌಲಭ್ಯ ಕೊರತೆಯಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ,

ಉ) ಬಂದಿದ್ದಲ್ಲಿ, ಚಿಕ್ಕಮಗಳೂರು ಎ ಪಿ ಎಂ ಸಿ ಯೂ ಸೇರಿದಂತೆ ಎ ಪಿ ಎಂ ಸಿ ಗಳಲ್ಲಿ ಸೌಲಭ್ಯ ಕಲ್ಪಿಸಲು ಸರ್ಕಾರ ತೆಗೆದುಕೊಂಡಿರುವ ಕ್ರಮ ಏನು?

ಶ್ರೀ ಶರಣಬಸಪ್ಪ ದರ್ಶನಾಪುರ (ಕೃಷಿ ಮಾರುಕಟ್ಟೆ ಸಚಿವರು)

ಅ) 122 ರೈತಭವನಗಳು ಇವೆ ಜಿಲ್ಲಾವಾರು ಮಾಹಿತಿಯನ್ನು ಅನುಬಂಧದಲ್ಲಿ ನೀಡಿದೆ

ಆ) ರೈತಭವನ ಇದೆ

ಇ) ಉದ್ಭವಿಸುವುದಿಲ್ಲ

ಈ) ಹೌದು